aglasem.com

FOR KARNATAKA CLASS 12 PREPARATION

Karnataka 2nd PUC Model Question Paper 2027 for Optional Kannada (Paper 2)

EXAM	YEAR	TYPE	SUBJECT
Karnataka Class 12	2027	Sample Paper	Kannada

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

2026-27 ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 2

ವಿಷಯ: ಐಚ್ಛಿಕ ಕನ್ನಡ **ಗರಿಷ್ಠ ಅಂಕಗಳು: 80**

ಸಮಯ: 03 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 48**

ಸೂಚನೆ:-ವಿಭಾಗ 'ಅ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ-ವಿಭಾಗ

I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ. **5x1-5**

1. ನೀಳಾಂಜನೆಯ ಸೊಬಗನ್ನು ವರ್ಣಿಸಲು ಈತನಿಂದಲೂ ಅಸಾಧ್ಯ.

   ಅ) ಇಂದ್ರ ಆ) ಧರಣೇಂದ್ರ

   ಇ) ನರೇಂದ್ರ ಈ) ಮುನೀಂದ್ರ

2. ಪರುಷ ಮುಟ್ಟಲು ಹಳೆಹಂಚು ಏನಾಗುವುದಿಲ್ಲ?

   ಅ) ಕಬ್ಬಿಣವಾಗುದಿಲ್ಲ ಆ) ಹೊನ್ನಾಗುವುದಿಲ್ಲ

   ಇ) ಪರುಷವಾಗುವುದಿಲ್ಲ ಈ) ಮಣಿಯಾಗುವುದಿಲ್ಲ

3. ನಾಗಿಯ ಎದೆಗೆ ಗೇರುಹೂವಿನಂತೆ ಲಗ್ಗೆ ಇಟ್ಟಿದ್ದು ಇದು.

   ಅ) ಚೆಲುವು ಆ) ಯೌವನ

   ಇ) ಪ್ರೀತಿ ಈ) ಭಯ

4. ಭೂಮಿಯಲ್ಲಿ ಹುಟ್ಟು ಕುರುಡರಿಗಿಂತ ಹೆಚ್ಚಾಗಿರುವವರು

   ಅ) ಅಜ್ಞಾನಿಗಳು ಆ) ಕಣ್ಣುಳ್ಳ ಕುರುಡರು

   ಇ) ದಾರಿ ಕಾಣದವರು ಈ) ಭಿಕ್ಷುಕರು

5. ಜಲಗಾರನಿಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?

   ಅ) ಜಲಗಾರ ಪ್ರಕೃತಿ ಪ್ರೇಮಿ

   ಆ) ಜಲಗಾರನಿಗೆ ಕಾಯಕವೇ ಕೈಲಾಸ

   ಇ) ಜಲಗಾರನು ದೀನ ದುರ್ಬಲರ ಸೇವೆ ಮಾಡುತ್ತಾನೆ

   ಈ) ಜಲಗಾರನ ಶಿವನು ಗುಡಿಯಲ್ಲಿದ್ದಾನೆ

II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿ ಮಾಡಿ **5x1-5**

6. 'ಜವ' ಪದದ ಅರ್ಥ _____
7. 'ಅಮರ್ದು' ಪದದ ತತ್ಸಮ ರೂಪ_____
8. 'ಹಿಗ್ಗು ' ಪದದ ವಿರುದ್ಧಾರ್ಥಕ ಪದ_____
9. ದ್ವಿರುಕ್ತಿಗೆ ಇದು ಉದಾಹರಣೆ_____
10. 'ಅರುಣೋದಯ' ಪದದ ಬಿಡಿಸಿ ಬರೆದ ರೂಪ_____

aglasem.com For more Question Papers, Sample Papers, Notes & Syllabus visit aglasem.com

(ಅಮೃತ, ನಲಿನಲಿ, ಅರುಣ+ಉದಯ, ಕುಗ್ಗು, ನಲಿಕಲಿ, ಯಮ)

III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ **5x1-5**

11. ಅ. ದನುಜ -ಹೊರಗಣ
    ಆ. ಕಿಟಿ -ಅಹಂಕಾರ
    ಇ. ಒಳಗಣ -ಋಷಿಪಡು
    ಈ. ಮುನಿ -ಅಸುರ
    ಉ. ತಲೆಗೇರು -ಹಂದಿ
    -ಕೋಪ, ಋಷಿ

IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ **5x1-5**

12. ಯಾರ ಇಂದ್ರಿಯಗಳು ಕ್ಷೀಣಿಸಿದವು?
13. ಸಾವು ಬಂದರೂ ನಿನ್ನ ಬಿಡುವುದಿಲ್ಲ ಎಂದು ಮಾಯೆ ಯಾರಿಗೆ ಹೇಳಿದಳು ?
14. ಕುಲಕೋಟಿಯನ್ನು ಉದ್ಧರಿಸುವವಳು ಯಾರು?
15. ಅರುಣೋದಯ ಹೇಗೆ ಮೂಡುತ್ತಿದೆ?
16. ಜವರಾಯ ಯಾರನ್ನು ಮುಕ್ಕಿದನು?

ಆ-ವಿಭಾಗ

V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ **4x2-8**

17. ಸುರವಧುವಿನ ನೃತ್ಯವನ್ನು ನೋಡುತ್ತಿದ್ದ ರಾಜರುಗಳ ಮನಸ್ಥಿತಿ ಹೇಗಿತ್ತು?
18. ಕೋಪಗೊಂಡ ಶಿವನು ಅರ್ಜುನನ್ನು ತುಳಿದಾಗ ಏನಾಯಿತು?
19. ಶಿವನು ಗುಂಡಯ್ಯನ ಜೊತೆ ಕುಣಿಯಲು ಕಾರಣವೇನು?
20. ಮಾಯೆಯು ಕನಸಿನ ಬಗ್ಗೆ ಮಾತನಾಡಿದಾಗ ಅಲ್ಲಮ ಕೊಡುವ ಉತ್ತರವೇನು?
21. ಇಳಿವಯಸ್ಸಿನ ಹೆಂಡತಿಯನ್ನು ಹೇಗೆ ನೋಡಿಕೊಳ್ಳಬೇಕು?

VI. ಕೆಳಗಿನ ನಾಲ್ಕು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ **4x3-12**

22. ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ
23. ಪೂಜಿಸಿದನರ್ಥಿತ ವೈರಿಜಯಂ ಧನಂಜಯಂ
24. ದೇವಾ ಎನಗಿದು ಕೌತುಕವೆಂದೆನೆ
25. ಗುಣದಯೆಯಿಲ್ಲದುದೇ ಹಗೆ
26. ವ್ಯಸನದಲಿ ದೇಹವು ಮಸಣವನು ಕಾಣುವುದು

VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ **2x4-8**

27. ಕಿರಾತಾರ್ಜುನ ಕಥಾನಕದ ಸಂದೇಶವೇನು? ವಿವರಿಸಿ.
28. ವಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮಪ್ರಭು ಹೇಗೆ ಸಾಧಾರವಾಗಿ ಖಂಡಿಸುತ್ತಾನೆ? ವಿವರಿಸಿ.
29. ಸರ್ವಜ್ಞನ ತನ್ನ ವಚನಗಳಲ್ಲಿ ದೇವರ ಇರುವಿಕೆಯ ಕುರಿತು ತಾಳಿರುವ ನಿಲುವುಗಳೇನು?
30. ಸಂಚಿಯ ಹೊನ್ನಮ್ಮ ಹೆಣ್ಣಿನ ಬಗ್ಗೆ ಹೆಮ್ಮೆಪಡಲು ಕಾರಣಗಳೇನು?

VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ **1x4-4**

31. ಆ ಮಧುರಾಕಾರಲತಾ
    ಕೋಮಳೆ ತನಗಾಗಳಾಯುರಂತಂ ಬರೆ ಸೌ

ಧಾಮಿನಿವೊಲ್ ಭೋಂಕನೆ ಸುರ
ಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್

32. ಧರ್ಮವುಳ್ಳವನೆ ಹಿರಿಯ ದುಷ್ಕರ್ಮವ
ನಿರ್ಮೂಲಿಪನೆ ಗುರು ತನ್ನ
ಮರ್ಮವನರವನೆ ಮಿತ್ರನು ರಂಗ ನಿನ್ನಯ
ಕೂರ್ಮೆವೆತ್ತವನೆ ಸರ್ವಗನು.

ಇ-ವಿಭಾಗ

IX. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ **1x2-2**

33. ಕರುವು ಏಕೆ ನಾಚಿಕೊಂಡಿತು?
34. ಕವಿ ಪ್ರೀತಿಯೊಂದು ನಾಗಸ್ವರ ಎನ್ನಲು ಕಾರಣವೇನು?

X. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ **1x4-4**

35. ನಾಗಿ ತೇರು ನೋಡಲು ಹೊರಟ ಪ್ರಸಂಗವನ್ನು ಚರ್ಚಿಸಿ.
36. 'ನಾಗಿಯ ಕಥೆ' ಕವಿತೆಯಲ್ಲಿನ ಬೆಕ್ಕಿನ ಸಾಂಕೇತಿಕತೆಯನ್ನು ಚರ್ಚಿಸಿ.

ಈ-ವಿಭಾಗ

XI. ಕೆಳಗಿನ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ **2x2-4**

37. ಜಲಗಾರನ ಪ್ರಕಾರ ಯಜ್ಞ ಮತ್ತು ಯಜ್ಞಶಾಲೆಗಳಾವುವು?
38. ಯುವಕ ಜಲಗಾರನನ್ನು ಏನೆಂದು ಆಹ್ವಾನಿಸುತ್ತಾನೆ?
39. ಧರೆಗೆ ಎಲ್ಲಿಯರೆಗೆ ಸುಖವಿಲ್ಲ?

XII. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ **2x3-6**

40. ಜಗದ ಕಣ್ಣೆ ಬಾಬಾ
41. ಜೀವದ ದರಿದ್ರನಾರಾಯಣರ ಸೇವೆಯಲ್ಲವೆ ಪರಮ ಪೂಜೆ
42. ಬೇರೊಂದು ರೀತಿಯಲ್ಲಿ ಬಣ್ಣಿಸಿರುವರು ನಿನ್ನ

XIII. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ **1x4-4**

43. ಅರುಣೋದಯವನ್ನು ಕುರಿತು ಭೂದೇವಿ ಹಾಡುತ್ತಿರುವುದನ್ನು ಚಿತ್ರಿಸಿ.
44. ಶಿವನ ಆಭರಣಗಳು ಯಾವುವು? ವಿವರವಾಗಿ ಬರೆಯಿರಿ.

ಉ-ವಿಭಾಗ

XIV. ಕೆಳಗಿನ ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ **1x4-4**

45. ಮಾಣದೆ ಮತ್ತೆರಗಿದನಾ
ಸ್ಥಾಣುವನಬ್ಬರಿಸಿ ಸಿಡಿಲ ಮಾಟ್ಕೆಯೊಳಭವಂ
ಕಾಣುತದಂ ಸೈರಿಸುತಂ
ಕೇಣಂಬಡೆದೊತ್ತಿ ಮೆಟ್ಟಿದಂ ಗಾಂಡೀವಿಯ=
46. ಹರಿ ಸಂಧಾನಕ್ಕೆ ವಂದಂದವಗಡಿಸಿದ ಅಹಂಕಾರಮೆಲ್ಲಿತ್ತೊ ಕೃಪಾಣಂ

XV. ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ. **1x4-4**

47. ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ
ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ
48. ಕಬ್ಬಿನೊಳು ರಸವ ನೆರೆಸವಿವ ಗಜದಂತೆ ಭಕ್ತಿ